# VI Semester 3 Year LL.B. /X Semester 5 Year B.A.LL.B./B.B.A.LL.B. Examination, June/July 2018
## LAW OF EVIDENCE

Duration : 3 Hours Max. Marks : 100

**Instructions** : 1. Answer Q. No. **9** and **any five** of the remaining.
ಪ್ರಶ್ನೆ **9** ಮತ್ತು ಉಳಿದವುಗಳಲ್ಲಿನ ಯಾವುದೇ ಐದಕ್ಕೆ ಉತ್ತರಿಸಿರಿ.

2. Question No. **9** carries **20** marks and the remaining carry **16** marks **each**.
ಪ್ರಶ್ನೆ **9**ಕ್ಕೆ **20** ಅಂಕಗಳು ಮತ್ತು ಉಳಿದವುಗಳಿಗೆ ತಲಾ **16** ಅಂಕಗಳು.

Q. No. 1. Discuss the relevance of facts showing preparation, motive and conduct. Marks : 16

ಪೂರ್ವ ತಯಾರಿ, ಉದ್ದೇಶ ಮತ್ತು ನಡತೆಯನ್ನು ತೋರಿಸುವ ಘಟನೆಗಳ ಸುಸಂಬದ್ಧತೆಯನ್ನು ಚರ್ಚಿಸಿರಿ.

Q. No. 2. What is confession ? Discuss the evidentiary value of confession of co-accused. Marks : 16

ತಪ್ಪೊಪ್ಪಿಗೆ ಎಂದರೇನು ? ಸಹ ಆಪಾದಿತನ ತಪ್ಪೊಪ್ಪಿಗೆಯ ಸಾಕ್ಷ್ಯ ಮೌಲ್ಯವನ್ನು ಚರ್ಚಿಸಿರಿ.

Q. No. 3. Explain the conditions of relevancy of dying declarations. Marks : 16

ಮರಣಕಾಲಿಕ ಹೇಳಿಕೆಗಳ ಸುಸಂಬದ್ಧತೆಯ ಷರತ್ತುಗಳನ್ನು ವಿವರಿಸಿರಿ.

Q. No. 4. Explain the relevance of character evidence in civil and criminal cases. Marks : 16

ದಿವಾನಿ ಮತ್ತು ಅಪರಾಧಿಕ ಪ್ರಕರಣಗಳಲ್ಲಿ ನಡತೆಯ ಸಾಕ್ಷ್ಯದ ಸುಸಂಬದ್ಧತೆಯನ್ನು ವಿವರಿಸಿರಿ.

Q. No. 5. Elucidate the exclusion of oral by documentary evidence. Marks : 16

ದಸ್ತಾವೇಜು ಸಾಕ್ಷ್ಯದಿಂದ ಮೌಖಿಕ ಸಾಕ್ಷ್ಯದ ಹೊರಹಾಕುವಿಕೆಯನ್ನು ವಿಶದೀಕರಿಸಿರಿ.

Q. No. 6. What are presumptions ? Explain the presumption in rape cases. Marks : 16

ಪೂರ್ವಭಾವನೆಗಳೆಂದರೇನು ? ಅತ್ಯಾಚಾರ ಪ್ರಕರಣಗಳಲ್ಲಿನ ಪೂರ್ವಭಾವನೆಯನ್ನು ವಿವರಿಸಿರಿ.

Q. No. 7. Discuss the privileges available to communications between advocates and clients. Marks : 16

ವಕೀಲರು ಮತ್ತು ಕಕ್ಷಿದಾರರ ನಡುವಿನ ಸಂಭಾಷಣೆಗಳಿಗಿರುವ ವಿಶೇಷ ಸ್ಥಾನಮಾನವನ್ನು ಚರ್ಚಿಸಿರಿ.

Q. No. 8. Write short notes on **any two** : Marks : 8×2=16

ಯಾವುದೇ **ಎರಡಕ್ಕೆ** ಲಘು ಟಿಪ್ಪಣಿ ಬರೆಯಿರಿ :

(a) Cross-examination
ಪಾಟೀ ಸವಾಲು

(b) Estoppel
ವಿಬಂಧ

(c) Identification parade.
ಗುರುತಿನ ಕವಾಯತು.

Q. No. 9. Solve **any two** : Marks : 10×2=20

ಯಾವುದೇ **ಎರಡನ್ನು** ತೀರ್ಮಾನಿಸಿರಿ :

(a) 'W', a married woman has committed suicide after leaving a note that her husband and his relatives subjected her to cruelty. Parents of 'W' have also deposed that 'W' was subjected to cruelty at her husband's house. Decide the relevancy of suicide note.

ತನ್ನ ಪತಿ ಮತ್ತು ಆತನ ಸಂಬಂಧಿಗಳು ತನ್ನನ್ನು ಕ್ರೂರವಾಗಿ ನಡೆಸಿಕೊಂಡರೆಂದು ಟಿಪ್ಪಣಿ ಬರೆದು 'W' ಎಂಬ ಮಹಿಳೆಯು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. ತಮ್ಮ ಮಗಳು ಅವಳ ಗಂಡನ ಮನೆಯಲ್ಲಿ ಕ್ರೌರ್ಯಕ್ಕೊಳಪಟ್ಟಿದ್ದಳೆಂದು ಅವಳ ಪಾಲಕರು ಸಾಕ್ಷ್ಯ ನುಡಿದಿದ್ದಾರೆ. ಆತ್ಮಹತ್ಯಾ ಟಿಪ್ಪಣಿಯ ಸುಸಂಬದ್ಧತೆಯನ್ನು ತೀರ್ಮಾನಿಸಿರಿ.

(b) 'X' has drawn a bill on 'Y' for Rs. 10,000 payable to 'Z'. Y' is denying the authority of 'X' to draw the said bill. Decide.

'Z' ನಿಗೆ ಸಂದಾಯವಾಗುವಂತೆ 'Y' ನ ಮೇಲೆ ರೂಪಾಯಿ 10,000 ಗಳ ಬಿಲ್ಲನ್ನು 'X'ನು ಬರೆದಿದ್ದಾನೆ. 'Y'ನು ಆ ಬಿಲ್ಲನ್ನು ಬರೆಯುವಲ್ಲಿನ 'X' ನ ಅಧಿಕಾರವನ್ನು ನಿರಾಕರಿಸುತ್ತಿದ್ದಾನೆ. ತೀರ್ಮಾನಿಸಿರಿ.

(c) 'A' is accused of beating 'B' with a club. It is shown that the by standers has advised 'A' not to beat 'B'. Is this fact relevant ?

'ಅ' ಎಂಬವನು 'ಬ' ನನ್ನು ಬಡಿಗೆಯಿಂದ ಬಡಿದಿರುವ ಆರೋಪಕ್ಕೆ ಒಳಗಾಗಿದ್ದಾನೆ. ಹೊಡೆಯುವ ಸಂದರ್ಭದಲ್ಲಿ, ಅಲ್ಲಿ ಸೇರಿದ ಜನರು 'ಅ'ನಿಗೆ 'ಬ'ನನ್ನು ಹೊಡೆಯದಂತೆ ಸಲಹೆ ನೀಡಿದರೆಂದು ತೋರಿಸಲಾಗಿದೆ. ಈ ವಾಸ್ತವಿಕತೆಯು ಸುಸಂಬದ್ಧವೇ ?